ಕಥೆ

# ಬಂಡ್ರೆ ಬಸಪ್ಪನ ದೊಡ್ಡಿ



**ಡಾ. ಲಕ್ಷ್ಮಣ ವಿ.ಎ.**
ಕಲೆ: ಸತೀಶ್ ಬಿರಾದಾರ್



'ಅಪ್ಪಾ ನಾ ಡಾಕ್ಟರ್ ಆಕ್ಕೇನಿ' ಅಂತ ಲಗಮಣ್ಣ ಸಣ್ಣ ಉಸಿರಿನಿಂದ ತುಸು ಭಯದಿಂದಲೇ ಬಸಣ್ಣನೆದುರು ಹೇಳುತ್ತಿರುವಾಗಲೇ ಉಸಿರೊಳಗೆ ಸಿಕ್ಕ ಬೀಡಿ ಹೊಗೆ ಎದೆಯಲ್ಲೇ ಉಳಿದಂತೆನಿಸಿ ಖೋಕ್ಕನೆ ಕೆಮ್ಮಿ, ತೇಲುಗಣ್ಣಿನಲ್ಲೊಮ್ಮೆ ಮಗನ ಮುಖ ನೋಡಿ ಮತ್ತೆ ಬೀಡಿ ಎಳೆಯುವುದರಲ್ಲಿ ತನ್ಮಯನಾದ. ಒಳಕೋಣೆಯಲ್ಲಿ ಜನಾಬಾಯಿ ಸೊಂಯ್ ಸೊಂಯ್ ಅಂತ ಈಗಲೊ ಆಗಲೋ ಉಸಿರು ಹೋಗುವವರ ಹಾಗೆ ಕೆಮ್ಮುವ ಸದ್ದು ಜನತಾ ಪ್ಲಾಟಿನ ಎರಡಂಕಣದ ಮನೆಯೊಳಗೇ ಸುತ್ತಿ ಸುತ್ತಿ ಅಪ್ಪ ಮಗನ ಕಿವಿಯೊಳಗೆ ಸುಂಯ್‌ಗುಟ್ಟುವುದ ಕೇಳಲಾರದೆ ತುದಿಗುಂಡಿಯಲ್ಲಿ ಕುಳಿತು ಬಸಣ್ಣ ಬೀಡಿ ಮೇಲೊಂದು ಬೀಡಿ ಹಚ್ಚಿದ್ದ. ಕರೆಂಟಿಲ್ಲದ ಆ ರಾತ್ರಿಯಲ್ಲಿ ಹುಲಿ ಬೇಟೆಗೆ ಬಲಿಯಾದ ಕಾಡು ಮಿಕದಂತೆ ಅವನ ಕಣ್ಣುಗಳು ಕೆಂಡ ಕಾರುತ್ತಿದ್ದವು. ಜನಾಬಾಯಿಯ ಕಾಯಿಲೆಗಿಂತ ಆಸ್ಪತ್ರೆಯ ಸಿಬ್ಬಂದಿ ಇವರನ್ನು ನಡೆಸಿಕೊಂಡ ರೀತಿ ಬಸಣ್ಣನನ್ನು ತೀವ್ರ ಘಾಸಿಗೊಳಿಸಿದಂತಿತ್ತು. ಜನಾಬಾಯಿಯ ಕೋವಿಡ್ ರಿಪೋರ್ಟು ನೆಗೆಟಿವ್ ಇದ್ದರೂ ಆಸ್ಪತ್ರೆಯ ಸಿಬ್ಬಂದಿ ಯಾರೂ ಮುಟ್ಟಲಿಲ್ಲ.ಅದೇನೊ ಎದೆಯ ಸಿ.ಟಿ. ಸ್ಕ್ಯಾನು ಕಫ ಪರೀಕ್ಷೆ, ಎಚ್.ಐ.ವಿ ಪರೀಕ್ಷೆ ನೂರೆಂಟು ಟೆಸ್ಟಿಗೆ ಬರೆದುಕೊಟ್ಟು ವೈದ್ಯರೂ ಕೈ ಬೀಸಿ ನಡೆದಿದ್ದರು.

ಬಸಣ್ಣನಿಗೆ ಈ ಮಿಷನ್ ಆಸ್ಪತ್ರೆ ಹೊಸದೇನಲ್ಲ. ತಿಂಗಳಿಗೆ ಎರಡು ತಿಂಗಳಿಗೊಮ್ಮೆ ಮನೆಯಿಂದ ನವಿಲ್ಯಾಳ ಕ್ರಾಸಿನ ತನಕ ಸೈಕಲ್ ಮೇಲೆ ಜನಾಬಾಯಿಯನ್ನು ಕುಳ್ಳಿರಿಸಿಕೊಂಡು ಅಲ್ಲಿಂದ ಬಿಜಾಪೂರ -ಮೀರಜ್ ಹೆದ್ದಾರಿ ತನಕ ಸಾಗಿ ಲಾರಿ, ಟೆಂಪೋ ಹತ್ತಿ ಮೀರಜ್‌ನ